<u>ಈ ಲೇಖನದ ವಿಷಯಾನುಕ್ರಮಣಿಕೆ</u>


| | |
|---|---|
| ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ಹನ್ನೊಂದನೆಯ ಪದ್ಯ | 2 |
| ದಾಶರಥಿ | 2 |
| ವೈಕುಂಠನಗರನಿವಾಸ | 3 |
| ತ್ರೈಜಗದೀಶ | 4 |
| ಪಾಪವಿನಾಶ | 4 |
| ಪರಮವಿಲಾಸ | 5 |
| ಹರಿ | 7 |
| ಸರ್ವೇಶ | 8 |
| ದೇವೇಶ | 9 |
| ವಾಸುದೇವ | 10 |
| ದಿನೇಶಶತಸಂಕಾಶ | 10 |
| ಯದುಕುಲವಂಶತಿಲಕ | 11 |
| ಪರಾಶರಾನತ ದೇವ | 11 |

# ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ಹನ್ನೊಂದನೆಯ ಪದ್ಯ

**ದಾಶರಥಿ ವೈಕುಂಠನಗರನಿ-**
**ವಾಸ ತ್ರೈಜಗೀಶ ಪಾಪವಿ-**
**ನಾಶ ಪರಮವಿಲಾಸ ಹರಿ ಸರ್ವೇಶ ದೇವೇಶ |**
**ವಾಸುದೇವ ದಿನೇಶಶತಸಂ-**
**ಕಾಶ ಯದುಕುಲವಂಶತಿಲಕ ಪ-**
**ರಾಶರಾನತ ದೇವ ರಕ್ಷಿಸು ನಮ್ಮನನವರತ ‖ ೧೧ ‖**

## ದಾಶರಥಿ

ದಶರಥನ ಮಗನಾಗಿ ಅವತರಿಸಿ ಬಂದವನು. ನಾಕು ದಿಕ್ಕುಗಳು, ನಾಕು ವಿದಿಕ್ಕುಗಳು, ಮೇಲ್ಭಾಗ ಕೆಳಭಾಗ ಎಂಬ ಹತ್ತೂ ದಿಕ್ಕುಗಳಲ್ಲಿಯೂ ರಥವನ್ನು ನಡೆಸುವ ಸಾಮರ್ಥ್ಯ ಅಜನ ಮಗನಿಗಿದ್ದುದರಿಂದ ಅವನು ದಶರಥ ಎಂದೇ ಖ್ಯಾತನಾಗುತ್ತಾನೆ. ಅವನು ಮಾಡಿದ

ಅಶ್ವಮೇಧ ಪುತ್ರಕಾಮೇಷ್ಟಿಗಳಿಂದ ಪ್ರೀತನಾದ ಶ್ರೀಹರಿ ಅವನ ಮಗನಾಗಿ ರಾಮನಾಗಿ ಅವತರಿಸಿ ಬರುತ್ತಾನೆ.

## ವೈಕುಂಠನಗರನಿವಾಸ

ಪರಮಾತ್ಮನ ಮೂರು ಧಾಮಗಳ ಕುರಿತು ಹಿಂದೆಯೇ ತಿಳಿದು ಕೊಂಡೆವು. ಅದರಲ್ಲಿ ಒಂದು ವೈಕುಂಠ. ಸತ್ಯಲೋಕದ ಸಮೀಪದಲ್ಲಿರುವ ಅಪ್ರಾಕೃತ ನಗರ. ಆ ನಗರದ ಎಲ್ಲ ಪದಾರ್ಥಗಳೂ ಚಿನ್ಮಯವೇ, ಚೇತನಾತ್ಮಕವೇ. ಸ್ವಯಂ ಲಕ್ಷ್ಮೀದೇವಿ ವೈಕುಂಠನಗರದ ರೂಪದಲ್ಲಿದ್ದು ಪರಮಾತ್ಮನ ಸೇವೆಯನ್ನು ಮಾಡುತ್ತಾಳೆ. ಅಲ್ಲಿ ಜನನ ಮರಣಗಳಿಲ್ಲ. ಅಲ್ಲಿ ಅನುಜ ತನುಜರಿಲ್ಲ. ಅಲ್ಲಿ ಕಷ್ಟ ಕೋಟಲೆಗಳಿಲ್ಲ, ದುಃಖದುಮ್ಮಾನಗಳಿಲ್ಲ. ಇರುವದೊಂದೇ,ಅದು ಪರಿಪೂರ್ಣಾನಂದ. ಆ ಆನಂದವನ್ನು ಅನಂತ ಮುಕ್ತಜೀವರಿಗೆ ನೀಡುತ್ತಾ ಭಗವಂತ ವೈಕುಂಠ ಎಂಬ ಹೆಸರಿನಿಂದ ಅಲ್ಲಿ ವಿರಾಜಿಸುತ್ತಿದ್ದಾನೆ.

## ತ್ರೈಜಗದೀಶ

ಸಮಸ್ತ ಬ್ರಹ್ಮಾಂಡಕ್ಕೆ ಒಡೆಯನಾದವನು. ತ್ರಿಲೋಕ ಎಂದರೆ ಸಮಸ್ತಲೋಕಗಳೂ ಎಂಬ ಅರ್ಥವನ್ನು ಈ ಹಿಂದೆಯೇ ತ್ರೈಜಗತ್ಪಾವನ ಎಂಬ ಶಬ್ದದ ಅರ್ಥವನ್ನು ಅನುಸಂಧಾನ ಮಾಡಿಕೊಳ್ಳುವಾಗ ತಿಳಿದಿದ್ದೇವೆ. ಸಮಸ್ತ ಚರಾಚರ ಪದಾರ್ಥಗಳಿಗೂ, ಬ್ರಹ್ಮಾಂಡಕ್ಕೂ, ವಿಶೇಷವಾಗಿ ಮೂಲೋಕಗಳಿಗೆ ಭಗವಂತ ಒಡೆಯ. ಭೂಮಿ, ಅಂತರಿಕ್ಷ, ಸ್ವರ್ಗ ಎಂಬ ಈ ಮೂರು ಲೋಕಗಳಿಗೆ ನಿಯಾಮಕವಾದ ಪರಮಾತ್ಮನ ರಹಸ್ಯದ ರೂಪಗಳನ್ನು ತೈತ್ತಿರೀಯ ಉಪನಿಷತ್ತಿನಲ್ಲಿ ನಿರೂಪಿಸಲಾಗಿದೆ. ಗುರ್ವನುಗ್ರಹವನ್ನು ಪಡೆದವರಿಗೆ ಆ ರೂಪಗಳ ತಿಳುವಳಿಕೆ ಬರಲು ಸಾಧ್ಯ, ಸಾಕ್ಷಾತ್ಕಾರವೊದಗಲು ಸಾಧ್ಯ.

## ಪಾಪವಿನಾಶ

ಮನುಷ್ಯ ದುಷ್ಕರ್ಮಗಳ ಆಚರಣೆಯನ್ನು ಮಾಡಿ ಪಡೆಯುವ ಕೆಟ್ಟ ಫಲವನ್ನು ನೀಡುವ ಅದೃಷ್ಟಕ್ಕೆ

ಪಾಪ ಎಂದು ಹೆಸರು. ಪಾಪವಿರುವವರೆಗೆ ಶಾಸ್ತ್ರಾಧ್ಯಯನ, ಅಪರೋಕ್ಷಜ್ಞಾನ, ಮೋಕ್ಷ ಹೀಗೆ ಯಾವ ಮಹಾಫಲಗಳನ್ನೂ ಪಡೆಯಲಿಕ್ಕಾಗುವದಿಲ್ಲ. ಆದ್ದರಿಂದ ಪ್ರಯತ್ನಪೂರ್ವಕವಾಗಿ ಮನುಷ್ಯ ಪಾಪಪರಿಹಾರವನ್ನು ಮಾಡಿಕೊಳ್ಳಬೇಕು. ಗಂಗಾದಿ ತೀರ್ಥಗಳಲ್ಲಿ ಸ್ನಾನ, ಕ್ಷೇತ್ರಪರ್ಯಟನೆ, ಉಪವಾಸ, ಸ್ತೋತ್ತಮರ ಸೇವೆ, ದಾನಗಳು ಯಜ್ಞಗಳು ಎಲ್ಲವೂ ಮನುಷ್ಯನಿಗೆ ಮುಕ್ತಿಯನ್ನು ನೀಡುತ್ತವೆ. ಆದರೆ ಮಹಾಯಾಸಸಾಧ್ಯವಾದ ಇವೆಲ್ಲಕ್ಕಿಂತಲೂ ಉತ್ತಮವಾದ, ಅತೀ ಸುಲಭಸಾಧ್ಯವಾದ ಸಾಧನ ಭಗವನ್ನಾಮಸ್ಮರಣೆ. ಉಳಿದೆಲ್ಲವೂ ಒಂದೆರಡು ಪಾಪಗಳನ್ನು ಪರಿಹರಿಸಿದರೆ ಶ್ರೀಹರಿ ಸಂಸಾರಕ್ಕೆ ಕಾರಣವಾದ ಪಾಪಗಳನ್ನೇ ವಿನಾಶ ಮಾಡುತ್ತಾನೆ.

## ಪರಮವಿಲಾಸ

ವಿಲಾಸ ಎನ್ನುವ ಶಬ್ದಕ್ಕೆ ಶೃಂಗಾರ ಎಂದರ್ಥ. ಶೃಂಗಾರಪೂರ್ಣವಾದ ಹಾವಭಾವಗಳು ಎಂದೂ ಅರ್ಥ. ಪರಮಾತ್ಮನ ಶೃಂಗಾರ

ಪರಮಾದ್ಭುತವಾದದ್ದು. ಸ್ವಯಂ ಅವನೇ ಶೃಂಗಾರಸ್ವರೂಪನಾದವನು. ಅವನ ಹಾವಭಾವಗಳೂ ಪರಮಾದ್ಭುತವಾದದ್ದು. ಅವನು ಕೊಳಲನ್ನು ಹಿಡಿದು ಕಣ್ಣು ಮುಚ್ಚಿ ತನ್ನನ್ನು ತಾನು ಆಸ್ವಾದಿಸುತ್ತಾ ತ್ರಿಭಂಗಿಯಲ್ಲಿ ನಿಂತದ್ದಾಗಲೀ, ಕೈಯಲ್ಲೊಂದು ಹಗ್ಗವನ್ನು ಹಿಡಿದು ಗೋಪಾಲಕರ ವೇಷಭೂಷಗಳನ್ನು ಧರಿಸಿ ಹಸು ಕರುಗಳನ್ನು ಅಟ್ಟಿಕೊಂಡು ಅಡ್ಡಾಡುವದಾಗಲೀ, ರುಕ್ಮಿಣೀ ಸತ್ಯಭಾಮಾ ಸಮೇತನಾಗಿ ನಾರದಾದಿ ಋಷಿವರ್ಯರಿಂದ ಸಂಸ್ತೂಯಮಾನನಾಗಿ ಬಂಗಾರದ ಸಿಂಹಾಸನದಲ್ಲಿ ಕುಳಿತದ್ದಾಗಲೀ, ಸಾರಥಿಯಾಗಿ ಚಾವಟಿಯನ್ನು ಹಿಡಿದು ಕುದುರೆಗಳನ್ನು ನಡೆಸುತ್ತಾ ರಥದಲ್ಲಿ ಪಾರ್ಥಸಾರಥಿಯಾಗಿ ಕುಳಿತದ್ದಾಗಲೀ ಎಲ್ಲವೂ ಅದ್ಭುತವೇ. ನೋಡುಗರ ಕಣ್ಣಿಗೆ ಹಬ್ಬವೇ. ಬೆಣ್ಣೆ ಮೆತ್ತಿದ ಅವನ ಮುಖವನ್ನು ಕಂಡ ಯಶೋದೆ, ಪ್ರೇಮ ತುಂಬಿದ ಕಣ್ಗಳನ್ನು ಕಂಡ ಗೋಪಿಕೆಯರು, ಅಮೃತದಂತಹ ಸ್ಪರ್ಶವನ್ನನುಭವಿಸಿದ ಗೋವುಗಳು, ಸರ್ವೋತ್ತಮವಾದ ಆಲಿಂಗನಸುಖವನ್ನನುಭವಿಸಿದ ಕೃಷ್ಣಪತ್ನಿಯರು,

ಅವನ ಪಾದಗಳನ್ನು ತಲೆಯ ಮೇಲೆ ಹೊತ್ತು ಮೆರೆದ ಉದ್ಧವ, ಸಹವಾಸಸುಖವನ್ನು ಅನುಭವಿಸಿದ ಯಾದವ ಪಾಂಡವರು, ಅವನೊಟ್ಟಿಗೆ ಆಟವಾಡಿದ ಗೊಲ್ಲರು, ಸುದಾಮ, ಬಲರಾಮರು ಎಲ್ಲರೂ ಧನ್ಯರೇ. ಕಾರಣ, ಅವನ ಅದ್ಭುತವಾದ ದೇಹದ ಪರಮಾದ್ಭುತ ಹಾವಭಾವಗಳನ್ನು ಕಂಡವರು ಅವರು.

## ಹರಿ

ಪರಮಾತ್ಮನ ಪರಮಮಂಗಳ ನಾಮ. ಭಕ್ತರು ಮಾಡುವ ಸಕಲವಿಧ ಯಜ್ಞಗಳನ್ನು ಸ್ವೀಕರಿಸುತ್ತಾನೆ ಆದ್ದರಿಂದ ಅವನಿಗೆ ಹರಿ ಎಂಬ ಹೆಸರು. ಈ ಹೆಸರಿನಿಂದ ಪ್ರತಿಪಾದ್ಯವಾದ ಈ ಗುಣ ಪರಮಾತ್ಮನಲ್ಲಿರುವದಕ್ಕೇ ಅಲ್ಲವೇ ನಾವು ಧನ್ಯರಾಗುವದು. ನಾವು ಮಾಡುವ ಯಜ್ಞವಂತೂ ಅಪೂರ್ಣ, ಅಪರಿಶುದ್ಧವೇ. ಕಾರಣ ಶಾಸ್ತ್ರ ಹೇಳುವ ರೀತಿಯ ಯಾವ ಸಂಭಾರಗಳನ್ನೂ ಹೊಂದಿಸುವ ಯೋಗ್ಯತೆಯೇ ನಮಗಿಲ್ಲ. ಆದರೂ ಮಾಡುವ ಏಕಾದಶ್ಯಾದಿ ಉಪವಾಸಗಳನ್ನೇ ತಪಸ್ಸನ್ನಾಗಿ, ಹರಿನೈವೇದ್ಯವನ್ನು ಉಂಡು,

ಹರಿಯಾತ್ರೆಯನ್ನು ಮಾಡುವ ಕಾಯಕವನ್ನೇ ಯಜ್ಞವನ್ನಾಗಿ, ಭಕ್ತಿಯಿಂದ ಮಾಡುವ ಹರಿನಾಮಸಂಕೀರ್ತನೆಯನ್ನು ಇವೆಲ್ಲದಕ್ಕಿಂತ ಹೆಚ್ಚಿನ ಆದರದಿಂದ ನಮ್ಮಿಂದ ಸ್ವೀಕರಿಸಿ ಪೊರೆವ ಕರುಣಾಳು ಭಗವಂತ. ಭಕ್ತರು ಮಾಡುವ ಯಜ್ಞ ದಾನ ತಪಸ್ಸುಗಳನ್ನು ಕಾರುಣ್ಯದಿಂದ ಸ್ವೀಕರಿಸುವವನು. ಹರಿ.

## ಸರ್ವೇಶ

ಪರಮಾತ್ಮನ ಒಡೆತನಕ್ಕೆ ಸೇರದ ಪದಾರ್ಥ ಜಗತ್ತಿನಲ್ಲಿಲ್ಲ. ನಾವು ನೋಡುವ ಮಣ್ಣು ಮಡಿಕೆಗಳಿಂದಾರಂಭಿಸಿ ಅಪರಿಚ್ಛಿನ್ನ ಪ್ರಕೃತಿಯವರೆಗಿನ ಎಲ್ಲ ಪದಾರ್ಥಗಳು, ಕಲಿಯಿಂದಾರಂಭಿಸಿ ಚತುರ್ಮುಖನವರೆಗಿನ ಅನಂತಾನಂತ ಜೀವರಾಶಿಗಳು, ಮಹಾಲಕ್ಷ್ಮೀದೇವಿ, ಅನಂತಾನಂತ ವೇದಗಳು, ಕರ್ಮಗಳು ಕರ್ಮದ ಫಲಗಳು ಎಲ್ಲವೂ ಭಗವಂತನ ಅಧೀನ. ಅವನದಲ್ಲದ ವಸ್ತು ಈ

ಜಗತ್ತಿನಲ್ಲಿ ಇಲ್ಲ. ಎಲ್ಲ ಪದಾರ್ಥಗಳು ಅಸ್ತಿತ್ವವನ್ನು ಪಡೆದಿರುವದೇ ಅವನ ಅನುಗ್ರಹದಿಂದ. ಸರ್ವೇಶ.

## ದೇವೇಶ

ಅವನು ಸರ್ವೇಶನಾದರೂ ವಿಶೇಷವಾಗಿ ದೇವೇಶ. ಕಾರಣ, ಮಧ್ಯಮಜೀವರು, ಅಸುರರು ಪರಮಾತ್ಮನ ಅಧೀನರಾದರೂ ಅಹಂಕಾರದಿಂದ ತಾವು ಪರಮಾತ್ಮನ ಅ◌ೀನ ಎಂದು ತಿಳಿಯುವದಿಲ್ಲಫಿ. ಸಕಲ ಜಡಪದಾರ್ಥಗಳಿಗೆ ಆ ತಿಳುವಳಿಕೆಯೇ ಇರುವದಿಲ್ಲ. ಉತ್ತಮ ಜೀವರಾಶಿಗಳಲ್ಲೂ ಮನುಷ್ಯೋತ್ತಮರಿಗೆ ಸಂಸಾರದಲ್ಲಿರುವಾಗ ಎರಡು ಘಳಿಗೆ ಜ್ಞಾನವಿರುತ್ತದೆ. ಇಪ್ಪತ್ತೆಂಟು ಘಳಿಗೆ ಅದರ ಅಜ್ಞಾನವೇ ಇರುತ್ತದೆ. ಆದರೆ ಸೃಷ್ಟಿಯ ಆರಂಭದಿಂದ ಅಂತ್ಯದವರೆಗೆ ತಾವು ಸರ್ವಾತ್ಮನಾ ಪರಮಾತ್ಮನ ಅಧೀನರಾದವರು ಎಂದು ಯಥಾರ್ಥವಾಗಿ ತಿಳಿಯುವವರು ದೇವತೆಗಳೇ. ಆದ್ದರಿಂದ ಪರಮಾತ್ಮ ದೇವೇಶ. ಎಲ್ಲದರ ಮೇಲಿನ ಒಡೆತನಕ್ಕಿಂತಲೂ ದೇವತೆಗಳ ಮೇಲಣ ಒಡೆತನ ಅವನಿಗೆ ಪ್ರಿಯವಾದದ್ದು.

## ವಾಸುದೇವ

ಸೂರ್ಯ ತನ್ನ ಕಿರಣಗಳಿಂದ ಮೂರು ಲೋಕಗಳನ್ನು ವ್ಯಾಪಿಸುವ ಹಾಗೆ ಸರ್ವವನ್ನೂ ವ್ಯಾಪಿಸಿ ಅದರ ಹೊರ ಒಳಗೆ ವ್ಯಾಪಿಸಿ ನಿಲ್ಲುವವನು ವಾಸುದೇವ. ಸಮಸ್ತ ಜೀವರಾಶಿಗಳನ್ನು ಬ್ರಹ್ಮಾಂಡದಲ್ಲಿ ವಾಸ ಮಾಡುವ ಹಾಗೆ ಅನುಕೂಲ ಮಾಡುವವನು ವಾಸುದೇವ.

## ದಿನೇಶಶತಸಂಕಾಶ

ದಿನೇಶ ಎಂದರೆ ಸೂರ್ಯ. ದಿನೇಶರ ನೂರನ್ನು ದಿನೇಶಶತ ಎನ್ನುತ್ತಾರೆ. ಸಂಕಾಶ ಎಂದರೆ ಸದೃಶವಾದದ್ದು. **“ಸಂಕಾಶಃ ಸದೃಶೇಽಂತಿಕೇ”** ಎಂದು ಹೈಮಕೋಶದ ವಚನ. ನೂರು ಸೂರ್ಯರಿಗೆ ಸದೃಶನಾದವನು ಅರ್ಥಾತ್ ನೂರು ಸೂರ್ಯರ ಪ್ರಕಾಶಕ್ಕೆ ಸಮನಾದ ಪ್ರಕಾಶವುಳ್ಳವನು. ಪರಮಾತ್ಮ ಒಬ್ಬ ಸೂರ್ಯ ತೋರುವಷ್ಟು ಪ್ರಭೆಯನ್ನೂ ತೋರಬಲ್ಲ, ಹತ್ತು ಸೂರ್ಯರ ಪ್ರಕಾಶವನ್ನೂ ತೋರಬಲ್ಲ, ನೂರು, ಸಾವಿರ, ಹತ್ತುಸಾವಿರ, ಲಕ್ಷ, ಕೋಟಿ

ಸೂರ್ಯಪ್ರಕಾಶನಾಗಿಯೂ ಕಂಗೊಳಸಬಲ್ಲ. ಆದರೆ ವಸ್ತುತಃ ಅವನು ಅನಂತಸೂರ್ಯಪ್ರಕಾಶ. ನೋಡುವವರ ಕಣ್ಣಿಗೆ ಯೋಗ್ಯತೆಯಿರುವಷ್ಟು ಕಾಣಿಸಿಕೊಳ್ಳುತ್ತಾನೆ.

## ಯದುಕುಲವಂಶತಿಲಕ

ವಂಶತಿಲಕ ಎಂದರೆ ಕುಲಭೂಷಣ. ಯದುಕುಲದ ಕುಲಭೂಷಣ ಶ್ರೀಕೃಷ್ಣ ಎಂದು ವಂಶತಿಲಕ ಶಬ್ದವನ್ನು ಕೃಷ್ಣವಾಚಕವಾಗಿ ಅರ್ಥೈಸಿಕೊಳ್ಳಬೇಕು. ಇಲ್ಲದಿದ್ದರೆ ಕುಲ ವಂಶ ಶಬ್ದಗಳಿಗೆ ಪುನರುಕ್ತಿಯುಂಟಾಗುತ್ತದೆ.

## ಪರಾಶರಾನತ ದೇವ

ಲೋಕದಲ್ಲಿ ಜ್ಞಾನದ ಅಭಾವದ ಪ್ರಸಂಗ ಬಂದೊದಗಿದಾಗ ಅದನ್ನು ನೀಗಿಸಲು ಪರಾಶರರು ಜ್ಞಾನಸ್ವರೂಪನಾದ ಭಗವಂತನನ್ನು ತಮ್ಮ ಮಗನನ್ನಾಗಿ ಪಡೆಯುವ ಬಯಕೆಯಿಂದ ಶ್ರೀಹರಿಯನ್ನು ಅನನ್ಯವಾಗಿ ಆರಾಸುತ್ತಾರೆ. ಅದರ ಫಲವಾಗಿ ವೇದವ್ಯಾಸರನ್ನು ಮಗನನ್ನಾಗಿ ಪಡೆದು

ಜಗತ್ತಿಗೆ ಅವರಿಂದ ಜ್ಞಾನ ದೊರೆಯುವ ಹಾಗೆ ಮಾಡುತ್ತಾರೆ. ಹೀಗಾಗಿ ಭಾಗವತೋತ್ತಮರಾದ ಪರಾಶರರಿಂದ ನಮಸ್ಕೃತ ಎಂದು ಪರಮಾತ್ಮನನ್ನು ದಾಸರು ಚಿಂತಿಸುತ್ತಿದ್ದಾರೆ. ಇಂಥಹ ಅನಂತ ಸದ್ಗುಣಗಳಿಂದ ಭರಿತನಾದ ಓ ದೇವ ನಮ್ಮನ್ನು ಅನವರತ ಬಿಡದೇ ರಕ್ಷಿಸು ‖ ೧೧ ‖

— ವಿಷ್ಣುದಾಸ ನಾಗೇಂದ್ರಾಚಾರ್ಯ



# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491